


# ಕಂದನ ಕೊಂದಿದ್ದು ಗುಂಡುಗಳು ಮಾತ್ರವೇ?

ಅಮೆರಿಕದಲ್ಲಿ ಈಗ ಶಾಲೆಗಳಲ್ಲಿ ಶೂಟೌಟ್ ನಡೆಯುವುದು, ಮುಗ್ಧರು ಅದಕ್ಕೆ ಬಲಿಯಾಗುವುದು ಸಾಮಾನ್ಯ ಸಂಗತಿ ಎನ್ನುವಂತಾಗಿಬಿಟ್ಟಿದೆ. ಎಳೆಯ ಮೈಯೊಳಗೆ ನೆಟ್ಟಿರುವ ಗುಂಡುಗಳಲ್ಲಿ, ಹರಿದ ನೆತ್ತರಲ್ಲಿ ನಮ್ಮ ಹೆಸರೂ ಇದೆಯಲ್ಲವೇ? ಮುಗ್ಧ ಕಂದಮ್ಮಗಳನ್ನು ಕೊಲ್ಲುವ ಕ್ರೌರ್ಯದ ಮೂಲ ಯಾವುದು? ನಾಗರಿಕ ಸಮುದಾಯವಾಗಿ, ನಮ್ಮ ಹಿತಕ್ಕಾಗಿಯೇ ಕಟ್ಟಿಕೊಂಡಿರುವ ವ್ಯವಸ್ಥೆಯ ಭಾಗವಾಗಿ ನಾವು ಎತ್ತ ಸಾಗುತ್ತಿದ್ದೇವೆ?

■ **ಕಾವ್ಯಾ ಕಡಮೆ**

ಲೇಖಕಿ ಅಮೆರಿಕದಲ್ಲಿ ವಾಸವಾಗಿರುವ ಕನ್ನಡದ ಬರಹಗಾರ್ತಿ

‘ಟೆಕ್ಸಾಸ್‌ನಲ್ಲಿ ಇನ್ನೊಂದು ಶೂಟಿಂಗ್ ಆಗಿದೆ, ನೋಡಿದಿಯೇನು?’ ಅಂತ ನನ್ನ ಗಂಡ ಬಂದು ಕೇಳಿದಾಗ ನಾನು ದೀಪಿಕಾ ಪಡುಕೋಣೆಯ ಕಾನ್ಸ್ ರೆಡ್ ಕಾರ್ಪೆಟ್ ಫೋಟೊಗಳನ್ನು ನಿರುಕಿಸುತ್ತಿದ್ದೆ. ಒಂದು ಕ್ಷಣ ನನ್ನ ರಸಾಸ್ವಾದವನ್ನು ಭಂಗಗೊಳಿಸಿದ್ದಕ್ಕಾಗಿ ಗಂಡನ ಮೇಲೂ, ಅವನು ತಂದ ಸುದ್ದಿಯ ಮೇಲೂ ಅಸಮಾಧಾನವೇ ಆಯಿತು. ತೋರಿಕೆಗೆಂಬಂತೆ ‘ಎಲ್ಲಂತೆ ಈ ಸಲ?’ ಎಂದು ಕೇಳಿದೆ. ‘ಎಲಿಮೆಂಟರಿ ಶಾಲೆಯಲ್ಲಂತೆ. ಹದಿನಾರಕ್ಕೂ ಹೆಚ್ಚು ಮಕ್ಕಳು, ಜೊತೆಗೆ ಇಬ್ಬರು ಟೀಚರುಗಳು ಸತ್ತಿದ್ದಾರೆ. ಹದಿನೆಂಟು ವರ್ಷದ ಯುವಕನಂತೆ ಹೊಡೆದವ. ಅವನನ್ನೂ ಪೊಲೀಸರು ಗುಂಡಿಟ್ಟು ಕೊಂದಿದ್ದಾರೆ. ಬೈಡನ್ ಪ್ರೆಸ್‌ಮೀಟಿನಲ್ಲಿ ಮಾತಾಡುತ್ತ ಅಳುತ್ತಿದ್ದರು.’

‘ಒಬಾಮಾನೂ ಅತ್ತಿದ್ದರಲ್ಲ ಸ್ಯಾಂಡಿ ಹುಕ್‌ನಲ್ಲಿ ಶೂಟಿಂಗ್ ಆದಾಗ...’ ಎಂಬ ಮಾತನ್ನು ನಾನು ಗಂಟಲಲ್ಲೇ ತಡೆಹಿಡಿದೆ. ಈ ಸುದ್ದಿಯನ್ನು ಇಂಚಿಂಚಾಗಿ ಒಳಗಿಳಿಸಿಕೊಂಡು ಒಳಗೊಳಗೇ ಮತ್ತೊಮ್ಮೆ ಧ್ವಂಸಗೊಳ್ಳಲು ನಾನಂತೂ ತಯಾರಿರಲಿಲ್ಲ. ಏನು ಆಗುವುದಿದೆ? ಯಾರದೋ ಮಕ್ಕಳು. ಒಳಗೆ ಬಿಟ್ಟುಕೊಂಡಷ್ಟೂ, ಆ ಕುರಿತು ಸುದ್ದಿಗಳನ್ನು ಓದಿ ಹಿಂದಿನ ದಿನವಷ್ಟೇ ತೆಗೆದುಕೊಂಡ ಅವರ ನಗು ಮೊಗದ ಫೋಟೊಗಳನ್ನು ಹುಡುಕಿ ಹುಡುಕಿ ನೋಡಿದಷ್ಟೂ ಅವರೆಲ್ಲ ನಮ್ಮದೇ ಮಕ್ಕಳು ಅನ್ನಿಸಿಬಿಡುತ್ತಾರೆ. ಹಾಗೆ ಆಗಿಬಿಟ್ಟರೆ ಕಾನ್ಸ್‌ನ ಫೋಟೊಗಳನ್ನು ನೋಡುವವರು ಯಾರು? ದಿನವೂ ಅದೇ ಸಮಯಕ್ಕಾಗಿ ಕಾಯ್ದು ನೋಡುವ ಲೇಟ್ ನೈಟ್ ಕಾಮಿಡಿ

